ಸರ್ಕಾರಿ ವಾಹನಗಳ ಬಳಕೆ.

474 - ಶ್ರೀ ಬಾಬಾಗೌಡ ಪಾಟೀಲ್ (ಕಿತ್ತೂರ್) : ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಎಲ್ಲಾ ಮಟ್ಟಗಳಲ್ಲಿ ಸರ್ಕಾರಿ ವಾಹನಗಳ ಬಳಕೆ ಸರಿಯಾಗಿ ಆಗುತ್ತಿಲ್ಲವೆಂಬುದು ಸರ್ಕಾರದ ಗಮನಕ್ಕೆ ಬಂದಿದೆಯೇ?*

ಆ) *1991-92ನೇ ಸಾಲಿನಲ್ಲಿ ಸರ್ಕಾರದ ಎಲ್ಲಾ ಇಲಾಖೆಗಳಲ್ಲಿರುವ ವಾಹನಗಳ ಒಟ್ಟು ದುರಸ್ತಿ ಮತ್ತು ಇಂಧನ ವೆಚ್ಚವೆಷ್ಟು?*

ಇ) *ಈ ವೆಚ್ಚ ಕಡಿಮೆ ಮಾಡಲು ಸರ್ಕಾರವು ಕೈಗೊಳ್ಳಲಿರುವ ಕ್ರಮಗಳೇನು?*

ಶ್ರೀ ಎಂ. ವೀರಪ್ಪ ಮೊಯ್ಲಿ (ಮುಖ್ಯ ಮಂತ್ರಿಗಳು):

ಅ) ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಲ್ಲಿ ಬಂದಿದೆ.

ಆ) ರೂ. 8,09,04,282-00 (ಇನ್ನೂ ಪೂರ್ಣ ಮಾಹಿತಿಗಳು ಇಲಾಖೆಗಳಿಂದ ಬರಬೇಕಾಗಿದ್ದು, ನಂತರ ಒದಗಿಸಲಾಗುವುದು.)

ಈ ವೆಚ್ಚಗಳನ್ನು ಕಡಿಮೆಗೊಳಿಸಲು ರಾಜ್ಯ ಸರ್ಕಾರವು ಈ ಕೆಳಕಂಡ ಕ್ರಮಗಳನ್ನು ಸೂಚಿಸಿದೆ.

1) ಸರ್ಕಾರದ ಕಾರ್ಯದರ್ಶಿಗಳಿಗೆ ಹಾಗೂ ಇಲಾಖಾ ಮುಖ್ಯಸ್ಥರಿಗೆ ಒಬ್ಬ ಸರ್ಕಾರಿ ಚಾಲಕನಿರುವ ಒಂದು ನಾಮನಿರ್ದಿಷ್ಟ ಸರ್ಕಾರಿ ವಾಹನವಿರುತ್ತದೆ. ಇದರ ಜೊತೆಗೆ ಸಚಿವಾಲಯದ ಇಲಾಖೆಯ ಹಾಗೂ ಇಲಾಖಾ ಮುಖ್ಯಸ್ಥರುಗಳಿಗೆ ಅಧಿಕಾರಿಯ ನಿಯಂತ್ರಣದಲ್ಲಿ ಸಾಮೂಹಿಕ ಬಳಕೆಗಾಗಿಯೇ (ಪ್ರೂಲ್ ವೆಹಿಕಲ್) ಒಬ್ಬ ಸರ್ಕಾರಿ ಚಾಲಕನಿರುವ ಒಂದು ವಾಹನವನ್ನು ಹೊಂದಿರುತ್ತದೆ. ಹೊಸ ವಾಹನಗಳನ್ನು ಖರೀದಿಸುವ ವಿಷಯದಲ್ಲಿ ಸ್ಥಾಯಿ ಉಪಸಮಿತಿಯ ಶಿಫಾರಸ್ತು ಮಾಡದ ಹೊರತು ಖರೀದಿ ಮಾಡತಕ್ಕದ್ದಲ್ಲ.

2) ನಾಮನಿರ್ದಿಷ್ಟ ವಾಹನಗಳನ್ನು ಪಡೆದಿರುವ ಮತ್ತು ಅವುಗಳನ್ನು ಮನೆಯಿಂದ ಕಛೇರಿಗೆ ಮತ್ತು ಕಛೇರಿಯಿಂದ ಮನೆಗೆ ಹೋಗಲು ವಾಹನ ಬಳಸಲು ಅನುಮತಿ ಪಡೆದಿರುವ ಅಧಿಕಾರಿಗಳು ವಾಹನವನ್ನು ಇನ್ನು ಮುಂದೆ ತಮ್ಮ ನಿವಾಸದಲ್ಲಿಯೇ ಉಳಿಸಿಕೊಳ್ಳಲು ಅನುಮತಿಸಲಾಗಿದೆ. ಇದರಿಂದ ಸಂಜೆಗೆ ವಾಹನ ನಿಲುಗಡೆಗಾಗಿ ಮನೆಯಿಂದ ಸರ್ಕಾರದ ಗ್ಯಾರೇಜಿಗೆ ತೆರಸುವ ಮತ್ತು ಮರುದಿನ ಸರ್ಕಾರದ ಗ್ಯಾರೇಜಿನಿಂದ ಅಧಿಕಾರಿಯ ಮನೆಯವರೆಗೆ ಅನಾವಶ್ಯಕ ಪ್ರಯಾಣ ಕಡಿಮೆಯಾಗಿ ಅನಾವಶ್ಯಕ ಪೆಟ್ರೋಲ್‌ವ್ಯಯವನ್ನು ತಪ್ಪಿಸಿದಂತಾಗುತ್ತದೆ.

3) ರಾಜ್ಯ ಕೇಂದ್ರ ಸ್ಥಾನದಿಂದ ದೂರದ ಜಿಲ್ಲೆಗಳಿಗೆ ಅದರಲ್ಲೂ ವಿಶೇಷವಾಗಿ ರೈಲು ಬಸ್ಸು ಮೂಲಕವೇ ಮಾಡಬಹುದಾದ ದೂರದ ಪ್ರವಾಸಕ್ಕಾಗಿ ವಾಹನಗಳನ್ನು ಬಳಸತಕ್ಕುದಲ್ಲ.

4) ಇಲಾಖಾ ಮುಖ್ಯಸ್ಥರ ಆಡಳಿತ ನಿಯಂತ್ರಣದಲ್ಲಿ ಬರುವ ಅಧಿಕಾರಿಗಳು ಕೇಂದ್ರ ಕಛೇರಿಯಿಂದಾಚೆ ಕೈಗೊಳ್ಳುವ ಪ್ರವಾಸಗಳಿಗಾಗಿ, ಕಛೇರಿ ಬಳಕೆಗಾಗಿಯೇ ಇರುವ ಕಾರನ್ನು ಬಳಸುವುದಕ್ಕಾಗಿ ಇಲಾಖಾ ಮುಖ್ಯಸ್ಥರ ಅನುಮತಿಯನ್ನು ಪಡೆದಿರಬೇಕೆಂದು ಇಲಾಖಾ ಮುಖ್ಯಸ್ಥರಿಗೆ ಸೂಚನೆ ನೀಡಲಾಗಿದೆ ಮತ್ತು ಸಾಮಾನ್ಯ ಸಂದರ್ಭಗಳಲ್ಲಿ ಅಂಥ ಅನುಮತಿ ನೀಡತಕ್ಕುದಲ್ಲ. ವಿಶೇಷವಾಗಿ ಇಂತಹ ಅಧಿಕಾರಿಗಳು ಜಿಲ್ಲಾ ಕೇಂದ್ರ ಸ್ಥಾನಕ್ಕೆ ಭೇಟಿ ನೀಡಿದಾಗ ಅಲ್ಲಿರುವ ಇಲಾಖೆಯ ವಾಹನವನ್ನು ಉಪಯೋಗಿಸಬಹುದು.

5) ಜಿಲ್ಲಾಧಿಕಾರಿಗಳು, ಜಿಲ್ಲಾ ಪರಿಷತ್ತುಗಳು ಮುಖ್ಯ ಕಾರ್ಯದರ್ಶಿಗಳು ಮತ್ತು ಅವರ ಸಿಬ್ಬಂದಿ ಅಥವಾ ಅಧೀನ ಅಧಿಕಾರಿಗಳು ಸಭೆಗಳು ಇತ್ಯಾದಿಗಳಿಗೆ ಹಾಜರಾಗುವ ಸಲುವಾಗಿ ರಾಜ್ಯ ಕೇಂದ್ರ ಸ್ಥಾನಕ್ಕೆ ಬರಲು ಸರ್ಕಾರಿ ವಾಹನಗಳನ್ನು ಬಳಸಲು ಬದಲಾಗಿ ಅದಷ್ಟು ರೈಲನ್ನು ಬಳಸುವ ಪ್ರಯತ್ನಿಸತಕ್ಕದು. ಮೇಲ್ಕಂಡ ಅಧಿಕಾರಿಗಳು ಅಧಿಕೃತ ಕೆಲಸದ ಮೇಲೆ ಬೆಂಗಳೂರಿಗೆ ಬಂದಾಗ ಅವರುಗಳ ಉಪಯೋಗಕ್ಕಾಗಿ ಪುನಃ ನಿಗದಿತ ಐದು ಸಮೂಹ ವಾಹನಗಳನ್ನು ರಾಜ್ಯ ಅತಿಥೇಯ ಸಂಸ್ಥೆಯಿಂದ ಒದಗಿಸಲಾಗಿರುವುದನ್ನು ಉಪಯೋಗಿಸತಕ್ಕದ್ದು.

6) ನಿರ್ದಿಷ್ಟವಾಗಿ, ಸಚಿವರುಗಳು ಮತ್ತು ಸರ್ಕಾರದ ಅಧಿಕಾರಿಗಳು ಭಾನುವಾರಗಳಂದು ಪ್ರವಾಸಗಳನ್ನು ಕೈಗೊಳ್ಳಬಾರದೆಂದೂ ತೀರ್ಮಾನಿಸಲಾಗಿದೆ. ಹಾಗೂ, ಅತೀ ತುರ್ತು ಸಂದರ್ಭಗಳನ್ನು ಹೊರತು ಪಡಿಸಿ, ಭಾನುವಾರಗಳಂದು ಸರ್ಕಾರಿ ಮೋಟಾರು ಕಾರುಗಳನ್ನು ಉಪಯೋಗಿಸಬಾರದೆಂದು ನಿರ್ದೇಶಿಸಲಾಗಿದೆ.

7) ಸರ್ಕಾರಿ ವಾಹನಗಳ ದುರಸ್ತಿಗೆ ಸಂಬಂಧಿಸಿದಂತೆ ದಿನಾಂಕ 15-12-1992ರ ಸರ್ಕಾರಿ ಆದೇಶ ಸಂಖ್ಯೆ: ಎಫ್‌ಡಿ 6 ಟಿಸಿಇ 87 ರಲ್ಲಿ ಮಾರ್ಗದರ್ಶನ ಸೂತ್ರಗಳನ್ನು ಸೂಚಿಸಿದೆ.

ಗ್ರಾಮೀಣ ಪ್ರದೇಶಗಳಲ್ಲಿ ಪ್ರಾಥಮಿಕ ಶಿಕ್ಷಕರುಗಳ ಕೊರತೆ.

475 - ಶ್ರೀ ಬಾಬಾಗೌಡ ಪಾಟೀಲ್ (ಕಿತ್ತೂರ್) : ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ನಗರ ಮತ್ತು ಗ್ರಾಮೀಣ ಪ್ರದೇಶಗಳಲ್ಲಿ ಶಿಕ್ಷಕ ವಿದ್ಯಾರ್ಥಿ ಪ್ರಮಾಣ ಎಷ್ಟು?

ಆ) ಈ ಅಸಮಾನತೆ ನೀಗಲು ಸರ್ಕಾರದವರು ಯಾವ ಕ್ರಮ ಕೈಗೊಳ್ಳುವರು?

ಶ್ರೀ ಎಂ. ವೀರಪ್ಪ ಮೊಯ್ಲಿ (ಮುಖ್ಯ ಮಂತ್ರಿಗಳು):

ಅ) ನಗರ ಪ್ರದೇಶ 1:51

ಗ್ರಾಮೀಣ ಪ್ರದೇಶ 1:54

ಆ) ನಗರ ಪ್ರದೇಶಗಳಲ್ಲಿನ ಹೆಚ್ಚುವರಿ ಶಿಕ್ಷಕರನ್ನು ಗ್ರಾಮೀಣ ಪ್ರದೇಶಗಳಿಗೆ ಅವಶ್ಯಕತೆಯಿರುವ ಕಡೆ ಹುದ್ದೆ ಸಮೇತ ಸ್ಥಳಾಂತರಿಸಲು ಸಂಬಂಧಿಸಿದ ಉಪ ನಿರ್ದೇಶಕರುಗಳಿಗೆ ಆದೇಶ ನೀಡಲಾಗಿದೆ.

ವಿದ್ಯುತ್ ನಿಲುಗಡೆಯಲ್ಲಿ ವ್ಯತ್ಯಾಸ.

476 - ಶ್ರೀ ಬಾಬಾಗೌಡ ಪಾಟೀಲ್ (ಕಿತ್ತೂರ್) : ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ವಿದ್ಯುತ್ ನಿಲುಗಡೆಯಲ್ಲಿ ಸರ್ಕಾರದವರು ಪಟ್ಟಣಕ್ಕೊಂದು ನೀತಿ ಅನುಸರಿಸಲು ಕಾರಣವೇನು?

ಆ) ವಿದ್ಯುತ್ ಕೊರತೆಯಿದ್ದಲ್ಲಿ ಕೋಟಿಗಿಂತ ಹೆಚ್ಚು ಬಾಕಿ ಇರುವ ಬಾಕಿದಾರರಿಗೆ ವಿದ್ಯುತ್ \ನಿಲುಗಡೆ ಮಾಡಿ ಎಲ್ಲಾ ಜನರಿಗೆ 24 ತಾಸು ವಿದ್ಯುತ್ ಸರಬರಾಜು ಮಾಡಲು ಕ್ರಮ ಕೈಗೊಳ್ಳಲಾಗುವುದೇ?

ಶ್ರೀ ಎಂ. ವೀರಪ್ಪ ಮೊಯ್ಲಿ (ಮುಖ್ಯಮಂತ್ರಿಗಳು):

ಅ) ಪಟ್ಟಣದ ವಿದ್ಯುತ್ ಬೇಡಿಕೆಯು ದೊಡ್ಡ ದೊಡ್ಡ ಕೈಗಾರಿಕೆಗಳು, ನೀರು ಸರಬರಾಜು ಸ್ಥಾವರಗಳು ಸರ್ವ ವಿದ್ಯುತ್ ಗೃಹಗಳು, ದೊಡ್ಡ ಆಸ್ಪತ್ರೆಗಳು,